# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ

**ಎಸ್.ಸಿ.ನಂಃ10007/2023**

**ಚಾಸಾ ಃ 26**

**ಪ್ರಾಸಾ ಃ 7**

**ಹೆಸರು** ಃ ಶ್ರೀರಾಮ
**ತಂದೆಯ ಹೆಸರು** ಃ ಬಾಲಕೃಷ್ಣ
**ವಯಸ್ಸು** ಃ 34 ವರ್ಷ
**ವೃತ್ತಿ** ಃ ಖಾಸಗಿ ಕೆಲಸ
**ವಾಸ** ಃ ಯಲಹಂಕ

**ಈ ದಿನ ದಿನಾಂಕಃ 28-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

1. ಕಳೆದ 5 ವರ್ಷಗಳಿಂದ ನಾನು ರಾಜಾನುಕುಂಟೆ ಬಳಿ ಸಿಂಗನಾಯಕನಹಳ್ಳಿ ಯಲ್ಲಿರುವ ಬಿಗ್ ಮಾರ್ಕೆಟ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಎರಡು ವರ್ಷಗಳ ಹಿಂದೆ ಜನೇವರಿ ತಿಂಗಳಲ್ಲಿ ದಿನಾಂಕ ವರ್ಷ ಗೊತ್ತಿರುವುದಿಲ್ಲ. ರಾಜಾನುಕುಂಟೆ ಪೋಲಿಸರು ಮತ್ತು ಇನ್ನೊಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದರು. ಸದರಿ ವ್ಯಕ್ತಿಯನ್ನು ತೋರಿಸಿ ಈತನು ಚಾಕುವಿನಿಂದ ಕೊಲೆ ಮಾಡಿದ್ದು ಸದರಿ ಚಾಕುವನ್ನು ನಿಮ್ಮ ಬಿಗ್ ಮಾರ್ಕೆಟ್ ನಲ್ಲಿ ಖರೀದಿಸಿರುತ್ತಾರೆ ಎಂದು ಆ ವ್ಯಕ್ತಿ ತಿಳಿಸಿದ್ದು ಆದುದರಿಂದ ಸಿಸಿಟಿವಿ ಯನ್ನು ಪರಿಶೀಲಿಸಬೇಕೆಂದು ತಿಳಿಸಿರುತ್ತಾರೆ.

2. ದಿನಾಂಕಃ 17-01-2023 ರ ಸಿಸಿಟಿವಿ ಪೂಟೇಜ್ ಅನ್ನು ಪರಿಶೀಲನೆ ಮಾಡಿ ಅದನ್ನು ಪೆನ್ ಡ್ರೈವ್ ನಲ್ಲಿ ಹಾಕಿಕೊಡುವಂತೆ ಹೇಳಿ ಹೋಗಿರುತ್ತಾರೆ. ಸದರಿ ಪೋಲಿಸರು ಆ ದಿನ ನಮ್ಮ ಮಾರ್ಕೆಟ್ ಗೆ ಕರೆದುಕೊಂಡು ಬಂದಿದ್ದ ವ್ಯಕ್ತಿಯನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ.

3. ಸದರಿ ಸಿಸಿಟಿವಿ ಪೂಟೇಜ್ ಅನ್ನು ಪರಿಶೀಲಿಸಿದಾಗ ಆ ವ್ಯಕ್ತಿಯು ಒಳಗೆ ಬಂದು ಚಾಕುವನ್ನು ಖರೀದಿಸಿ ಬಿಲ್ ಮಾಡಿಸಿ ತೆಗೆದುಕೊಂಡು ಹೋಗಿರುವುದು ಕಂಡು ಬಂದಿರುತ್ತದೆ. ಸದರಿ ದೃಶ್ಯವನ್ನು ಪೆನ್ ಡ್ರೆವ್ ನಲ್ಲಿ ಹಾಕಿ ದಿನಾಂಕಃ 03-02-2023 ರಂದು ಪೊಲಿಸರಿಗೆ ನೀಡಿರುತ್ತೇನೆ.



4. ಪೋಲೀಸರು ಅದನ್ನು ತೆಗೆದುಕೊಂಡು ಮಹಜರು ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಮತ್ತು ಪೋಟೋವನ್ನು ಸಹ ತೆಗೆದುಕೊಂಡಿರುತ್ತಾರೆ. ನಾನು ಸಹಿ ಮಾಡಿದ ಮಹಜರ ಅನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 11 ಎಂದು ಗುರುತಿಸಲಾಯಿತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋವನ್ನು ನೋಡಿ ಗುರುತಿಸುತ್ತೇನೆ ಸದರಿ

ಫೋಟೋದಲ್ಲಿ ತಾನು ಇರುವುದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 12 ಎಂದು ಗುರುತಿಸಲಾಯಿತು.

5. ಆ ಕಾಲದಲ್ಲಿ ನಮ್ಮ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಚಾಸಾ 15 ಜಿಯಾದ್ ಮತ್ತು ಚಾಸಾ 16 ಶರೀಫ್ ಇದ್ದರು. ಆಗ ಸಮಯ ಮದ್ಯಾಹ್ನ 02.00 ರಿಂದ 03.00 ಆಗಿರಬಹುದು. ನಾನು ಪೋಲಿಸರಿಗೆ ನೀಡಿದ ಪೆನ್ ಡ್ರೈವ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುತ್ತೇನೆ.

ಈ ಹಂತದಲ್ಲಿ ಸದರಿ ಪೆನ್ ಡ್ರೈವ್ ಎಫ್.ಎಸ್.ಎಲ್ ಪರೀಕ್ಷೆಗೆ ಹೋಗಿದ್ದರಿಂದ ಅದನ್ನು ಪಡೆಯುವ ಉದ್ದೇಶದಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸರ್ಕಾರಿ ಅಭಿಯೋಜಕರು ಸಮಯಕೋರಿದ್ದರಿಂದ ನೀಡಲಾಯಿತು.

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ